**ಸಿ.ಸಿ. ನಂ. 874/2016**

**ಸಾಕ್ಷಿಃ ಸಿ.ಡಬ್ಲ್ಯೂಃ7, ಪಿ.ಡಬ್ಲ್ಯೂಃ 6**

ಸಾಕ್ಷಿದಾರನ ಹೆಸರು : ಕೃಷ್ಣಮೂರ್ತಿ
ತಂದೆಯ ಹೆಸರು : ಲೇಟ್ ಹನುಮಂತಯ್ಯ
ವಯಸ್ಸು : 56 ವರ್ಷ
ಉದ್ಯೋಗ : ಅಬಕಾರಿ ನಿರೀಕ್ಷಕರು, ಬೆಂಗಳೂರು,
ವಾಸಸ್ಥಳ : ಬೆಂಗಳೂರು

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 17-12-2025**

**ಮುಖ್ಯ ವಿಚಾರಣೆಃ** ಎಪಿಪಿಯವರಿಂದ,

ದಿಃ07-10-2013 ರಿಂದ ದಿಃ05-11-2016 ರವರೆಗೆ ಬೇಲೂರು ಅಬಕಾರಿ ವಲಯದಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ11-09-2015 ರಂದು ಬೆಃ 11.00 ಗಂಟೆ ಸಮಯದಲ್ಲಿ ಸರ್ಕಾರಿ ವಾಹನ ಸಂಖ್ಯೆ ಕೆಎ-13-ಜಿ-645 ರಲ್ಲಿ ಸಿಬ್ಬಂದಿಯಾದ ಚಾಸಾ-3 ರಿಂದ 5 ರವರೊಂದಿಗೆ ಗಸ್ತು ಮಾಡುತ್ತಿದ್ದಾಗ ಧರ್ಮೇಶ್ ಬಿನ್ ಬೋರೆಗೌಡ ಅಕ್ರಮವಾಗಿ ಕಳ್ಳಭಟ್ಟಿಯನ್ನು ತಯಾರಿಸುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ಸದರಿ ಮಾಹಿತಿ ಮೇರೆಗೆ ಅಂಬೇಡ್ಕರ್ ಸರ್ಕಲ್ ಹತ್ತಿರ ಬಂದು ಚಾಸಾ-1 ಮತ್ತು 2 ರವರಿಗೆ ಬಂದ ವಿಷಯ ತಿಳಿಸಿ ಮನೆಯನ್ನು ಶೋದನೆ ಮಾಡುವ ಸಮಯದಲ್ಲಿ ನಮ್ಮೊಂದಿಗೆ ಬರಬೇಕೆಂದು ಅವರಿಗೆ ತಿಳಿಸಿದಾಗ ಅವರು ಒಪ್ಪಿಕೊಂಡಿರುತ್ತಾರೆ. ನಂತರ ಅವರೊಂದಿಗೆ ಅಗಸರಳ್ಳಿ ಗ್ರಾಮಕ್ಕೆ ಹೋಗಿ ಗ್ರಾಮಸ್ಥರನ್ನು ಪಂಚರನ್ನಾಗಿ ಸಹಕರಿಸುವಂತೆ ಕೋರಿದಾಗ ಅವರು ನಿರಾಕರಿಸಿರುತ್ತಾರೆ. ಗ್ರಾಮಸ್ಥರು ಧರ್ಮೇಶ್ ರವರ ಮನೆಯನ್ನು ತೋರಿಸಿರುತ್ತಾರೆ. ಮನೆಯ ಬಾಗಿಲು ಬೀಗಾ ಹಾಕಿದ್ದು, ಕಾರ್ ಶೆಡ್ ನ ಪಕ್ಕದಲ್ಲಿ ಘಾಟು ವಾಸನೆ ಬಂದಿದ್ದು,

ಶೋಧನೆ ಮಾಡಲು  ಸಮಯವಕಾಶ ಇಲ್ಲದ ಕಾರಣ ಶೋಧನ ಸಮುಚಿತ ಆಧಾರವನ್ನು ತಯಾರಿಸಿ ದನದ ಕೊಟ್ಟಿಗೆ ಎಡಭಾಗದಲ್ಲಿ ಶೋಧಿಸಿದಾಗ ಬಿಳಿಬಣ್ಣದ ಪ್ಲಾಸ್ಟಿಕ್ ಕ್ಯಾನ್ ನಲ್ಲಿ ಸುಮಾರು 3 ಲೀ ನಷ್ಟು ಕಳ್ಳಭಟ್ಟಿ ಸಾರಾಯಿ ಇರುವುದು ಹಾಗೂ 2 ಪ್ಲಾಸ್ಟಿಕ್ ಕೊಡಗಳಲ್ಲಿ ತಲಾ 15 ಲೀ ನಂತೆ 30 ಲೀ ನಷ್ಟು ಬೆಲ್ಲದ ಕೊಳೆ ಇರುವುದು ಕಂಡು ಬಂದಿರುತ್ತದೆ. ಕಳ್ಳಭಟ್ಟಿ ತಾಯಾರಿಸಲು ಉಪಯೋಗಿಸು ಅಲುಮಿನಿಯಂ ಪಾತ್ರೆ ಕಂಡು ಬಂದಿರುತ್ತದೆ.  ನಂತರ ಎಫ್ ಎಸ್ ಎಲ್ ಗಾಗಿ ಕಳ್ಳಭಟ್ಟಿ ಸಾರಾಯಿಯಿಂದ 500 ಎಂ ಎಲ್ ಮತ್ತು ಬೆಲ್ಲದ ಕೊಳೆಯಿಂದ ತಲಾ 500 ಎಂ ಎಲ್ ನಷ್ಟು ರಾಸಾಯಿನಿಕ ಪರೀಕ್ಷೆಗೆ ಮಾದರಿ ತೆಗೆದು ಮಾದರಿ ಚೀಟಿ ತಯಾರಿಸಿ ಪಂಚರ ಸಹಿ ಪಡೆದು ಸ್ವತ್ತುಗಳಿಗೆ ಅಂಟಿಸಲಾಯಿತು. ನಂತರ ದಾರದಿಂದ ಕಟ್ಟಿ ಬಟ್ಟೆಯಿಂದ ಸುತ್ತಿ ಇಲಾಖಾ ಸೀಲಿನಿಂದ ಸೀಲು ಮಾಡಲಾಯಿತು. ನಂತರ ಆರೋಪಿಯನ್ನು ಕಚೇರಿಗೆ ತಂದು ಪ್ರವವ ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.  ಮಹಜರ್ ನ್ನು ಮಃ12.40 ರಿಂದ 1.45 ರವರೆಗೆ ತಯಾರಿಸಿರುತ್ತೇನೆ. ವಶಪಡಿಸಿಕೊಂಡ ಸ್ವತ್ತುಗಳನ್ನು ಇಲಾಖಾ ವಶಕ್ಕೆ ಪಡೆದು ಆರೋಪಿ ವಿರುದ್ಧ ಪ್ರಕರಣ ದಾಖಲಿಸಿ ಪ್ರ ವವ ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿಃ28-09-2015 ರಂದು ಆರೋಪಿ ಮನೆಯ ಮಾಲೀಕತ್ವ ಕೋರಿ ಎಂ ಸಂಧಿ ಗ್ರಾಮ ಪಂಚಾಯಿತಿಗೆ ಪತ್ರ ಬರೆದಿರುತ್ತೇನೆ.

ದಿಃ06-10-2015 ರಂದು ಚಾಸಾ-3 ರವರ ಮೂಲಕ ಮಾದರಿಗಳನ್ನು ಕೇಂದ್ರ ರಾಸಾಯಿನಿಕ ಪರೀಕ್ಷಕರು ಬೆಂಗಳೂರಿಗೆ ರಾಸಾಯಿನಿಕ ಪರೀಕ್ಷೆಗಾಗಿ ಕಳುಹಿಸಿರುತ್ತೇನೆ.

ದಿಃ16-10-2015 ರಂದು ರಾಸಾಯಿನಿಕ ಪರೀಕ್ಷಾ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿಃ09-12-2015 ರಂದು ಆರೋಪಿ ತಂದೆಯ ಹೆಸರಿನಲ್ಲಿದ್ದ ಮನೆಗೆ ಸಂಬಂದಿಸಿದ ಮಾಲೀಕತ್ವ ದೃಢೀಕರಣ ಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಮನೆಯ ಮಾಲೀಕರು ಮರಣ ಹೊಂದಿದ್ದರಿಂದ ಅವರ ವಿರುದ್ಧ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುವುದಿಲ್ಲ. ತನಿಖೆ ಪೂರ್ಣಗೊಂಡ ನಂತರ ಆರೋಪಿ ವಿರುದ್ಧ ದೋಷರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿ ನಿಪಿ-1 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ-1ಇ ಎಂದು ಗುರುತಿಸಲಾಯಿತು.

ಮಾದರಿ ಸೀಲಿನ ನಕಲಿನಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ-2ಸಿ ಎಂದು ಗುರುತಿಸಲಾಯಿತು.

ಶೋಧನ ವಾರೆಂಟ್ ನ್ನು ನೋಡಿ ಪರಿಶೀಲಿಸಲಾಗಿ ಸಹಿ ಇಲ್ಲದ ಕಾರಣ ಸದರಿ ದಾಖಲೆಯನ್ನು ಗುರುತಿಸಿರುವುದಿಲ್ಲ.

ನಿಪಿ-5 ಮುಖ್ಯ ರಾಸಾಯಿನಿಕ ತಜ್ಞರಿಗೆ ಬರೆದ ಪತ್ರದಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5ಬಿ ಎಂದು ಗುರುತಿಸಲಾಯಿತು.

ನಿಪಿ-6 ರಲ್ಲಿರುವ ಪಿಡಿಒ ರವರಿಗೆ ಬರೆದ ಪತ್ರದಲ್ಲಿರು ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6ಎ ಎಂದು ಗುರುತಿಸಲಾಯಿತು.

ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು ಸಹಿಯನ್ನು ನಿಪಿ-8ಎ ಎಂದು ಗುರುತಿಸಲಾಯಿತು.

ರಾಸಾಯಿನಿಕ ಪರೀಕ್ಷೆ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9 ಎಂದು ಸಹಿಯನ್ನು ನಿಪಿ-9ಎ ಎಂದು ಗುರುತಿಸಲಾಯಿತು.

ಸಾಕ್ಷಿಯು ರಾಸಾಯಿನಿಕ ಪರೀಕ್ಷೆಗೆ ಮಾದರಿ ತೆಗೆದ 3 ಪ್ಲಾಸ್ಟಿಕ್ ಬಾಟಲಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ಮುಮಾ-1 ರಿಂದ 3 ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ  ಸಿ ಎಂ ಪಿ ವಕೀಲರಿಂದ

ದಿಃ06-05-2020----ಮಹಜರ್ ನ್ನು ಚಾಸಾ-5 ರವರ ಬರೆದಿರುತ್ತಾರೆ. ಬೇಲೂರು ಟೌನ್ ನಲ್ಲಿ ಗಸ್ತು ಮಾಡುತ್ತಿದಾಗ 11.15 ನಿಮಿಷಕ್ಕೆ ಮಾಹಿತಿ ಬಂದಿರುತ್ತದೆ.  ಪಂಚರನ್ನು ನೇಮಿಸಿಕೊಂಡಾಗ ಸಮಯ 11.30 ಆಗಿತ್ತು.  ಮಾಹಿತಿ ಬಂದ ಸ್ಥಳದಿಂದ ಘಟನಾ ಸ್ಥಳ 10-11 ಕಿಮೀ ದೂರ ಆಗುತ್ತದೆ.  ಘಟನಾ  ಸ್ಥಳಕ್ಕೆ ಗಬ್ಬಲಗೋಡು ಮಾರ್ಗವಾಗಿ ಹೋಗಿರುತ್ತೇವೆ. ಅಗಸರಹಳ್ಳಿ ಗ್ರಾಮಕ್ಕೆ ಹೋದಾಗ ಸಮಯ 12.15 ಆಗಿತ್ತು.  ಆರೋಪಿ ಮನೆಯ ಹತ್ತಿರ ಹೋದಾಗ 12.30 ಆಗಿತ್ತು.  ಮಹಜರ್ ಮತ್ತು ಪ್ರವವರದಿಯಲ್ಲಿ ಆರೋಪಿ ಮನೆಯ ಚಹರೆ ನಮೂದಿಸಿಲ್ಲ. ಆರೋಪಿ ಮನೆ ಹಂಚಿನ ಮನೆಯಾಗಿತ್ತು.

ಆರೋಪಿ ಮನೆಯ ಯಾವ ದಿಕ್ಕಿನಲ್ಲಿ ದನದ ಕೊಟ್ಟಿಗೆ ಇತ್ತು ಎಂದು ಹೇಳಲು ಆಗುವುದಿಲ್ಲ. ಮಹಜರ್ ನಲ್ಲಿ ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನ್  ಸಿಕ್ಕಿರುವ ಬಗ್ಗೆ ಬರೆದಿಲ್ಲ. ಕೊಡಗಳ ಬಣ್ಣ ಮಹಜರ್ ನಲ್ಲಿ ನಮೂದಿಸಿಲ್ಲ.  ರಾಸಾಯಿನಿಕ ಪರೀಕ್ಷೆಗೆ ತೆಗೆದ ಮಾದರಿಗಳಿಗೆ ಚೀಟಿ ಅಂಟಿಸಿರುತ್ತೇವೆ.  ಸದರಿ ಚೀಟಿಯಲ್ಲಿ ಪ್ರವವರದಿ ಸಂಖ್ಯೆ ನಮೂದಿಸಿರುತ್ತೇನೆ. ಚೀಟಿ ಅಂಟಿಸುವಾಗ ಪ್ರವವ ವರದಿ ತಯಾರಾಗಿರಲಿಲ್ಲ.

ದಿಃ11-09-2015 ನಾವು ಅಗಸರಹಳ್ಳಿ ಗ್ರಾಮಕ್ಕೆ  ಹೋಗಿ  ಆರೋಪಿ ಮನೆಯಲ್ಲಿ ಯಾವುದೇ ದಾಳಿ ಮಾಡಿ ಯಾವುದೇ ವಸ್ತುಗಳನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಮನೆಯಲ್ಲಿ ಯಾವುದೇ ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮಹಜರ್ ನ್ನು ಕಚೇರಿಯಲ್ಲಿ ತಯಾರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗ ಮನೆಗೆ ಸಂಬಂದಿಸಿದ ಯಾವುದೇ ದಾಖಲೆಯನ್ನು ಪಡೆದಕೊಂಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂದಿಸಿದಂತೆ ಯಾವುದೇ ಮುದ್ದೇಮಾಲುಗಳನ್ನ ರಾಸಾಯಿನಿಕ ಪರೀಕ್ಷೆಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ.  ಇಲಾಖಾ ಅಂಕಿಅಂಶದ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ಮುದ್ದೆ ಮಾಲುಗಳಿಗು ಮತ್ತು ಆರೋಪಿಗು ಯಾವುದೇ ಸಂಬಂದ ಇಲ್ಲ ಎಂದರೆ

ಸರಿಯಲ್ಲ. ಆರೋಪಿ ವಿರುದ್ದ ಸುಳ್ಳು ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**
(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾ.ದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಅದೆ.

(ನಾಗೇಂದ್ರ)
**ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ.ಎಂ.ಎಫ್.ಸಿ. ನ್ಯಾಯಾಲಯ ಬೇಲೂರು**